ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಹೊನ್ನಾವರ.

ಸಿಸಿ ನಂಃ 1547/2021
ಪಿ ಡಬ್ಲುಃ 02
ಸಿ ಡಬ್ಲುಃ 04.

| | |
|---|---|
| ಸಾಕ್ಷಿದಾರರ ಹೆಸರು | ರತ್ನಾಕರ ಮೇಸ್ತ |
| ತಂದೆಯ ಹೆಸರು | ಗಣಪಯ್ಯ ಮೇಸ್ತ |
| ವಯಸ್ಸು | 51 ವರ್ಷ |
| ಉದ್ಯೋಗ | ಮನೆಕೆಲಸ |
| ವಾಸ್ತವ್ಯ | ಖರ್ವಾ, ತಾಃ ಹೊನ್ನಾವರ |

ಸಾಕ್ಷಿಯನ್ನು ದಿನಾಂಕ **02-04-2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಚಾಸಾ 1 ರವರು ನನ್ನ ತಮ್ಮ. ಆರೋಪಿತರು ನಮ್ಮ ಊರಿನವರು. ಆರೋಪಿ ಮತ್ತು ನಮ್ಮ ನಡುವೆ ಮೊದಲಿನಿಂದ ಗಲಾಟೆ ಇರುವುದಿಲ್ಲ. ದಿನಾಂಕಃ 18.07.2020 ರಂದು ಸಂಜೆ 6.00 ಗಂಟೆಯ ಸುಮಾರಿಗೆ ನಾನು ಮತ್ತು ಚಾಸಾ 1 ರವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ, 1 ರಿಂದ 5 ನೇ ಆರೋಪಿತರು ಹಾಗೂ ನಾಗರಾಜ ವಿಷ್ಣು ಮೇಸ್ತರವರು ಏಕಾಏಕಿ ಗುಂಪು ಕಟ್ಟಿಕೊಂಡು ನಮ್ಮ ಜಾಗಕ್ಕೆ ಬಂದು, ನಾವು ನಮ್ಮ ಜಾಗದಲ್ಲಿ ಸಿಮೆಂಟ್ ಕೊಟ್ಟಿಗೆಯ ಪಕ್ಕದಲ್ಲಿ ಕಟ್ಟಿದ ತಡೆಗೋಡೆಯನ್ನು ಒಡೆದು ಹಾಕಿದರು. ನಾವು ಅದನ್ನು ತಡೆಯಲು ಪ್ರಯತ್ನಪಟ್ಟು ಅದನ್ನು ಏಕೆ ಒಡೆಯುತ್ತೀರಾ ಎಂದು ಆರೋಪಿತರನ್ನು ಪ್ರಶ್ನಿಸಿದಾಗ, ಆರೋಪಿತರು ಇಲ್ಲಿ ನಾವು ಅಲ್ಲಿ ರಸ್ತೆಯನ್ನು ಮಾಡುತ್ತೇವೆ ಎಂಬುದಾಗಿ ಹೇಳಿದರು. ಆ ಸಂದರ್ಭದಲ್ಲಿ ನಾವು ಅವರೊಂದಿಗೆ ಮಾತುಕತೆ ಮಾಡುವಾಗ ಆರೋಪಿತರು ಚಾಸಾ 1 ಹಾಗೂ ನನ್ನ ಮುಖದ ಮೇಲೆ ಹೊಡೆದರು. 1 ನೇ ಆರೋಪಿಯು ಮತ್ತು ನಾಗರಾಜ ಮೇಸ್ತರವರು ನನ್ನನ್ನು ದೂಡಿಹಾಕಿ ಬೆನ್ನಿನ ಮೇಲೆ ತುಳಿದರು. ನಮ್ಮ ಗಲಾಟೆಯನ್ನು ಕೇಳಿ ನಮ್ಮ ಮನೆಯಲ್ಲಿದ್ದ ನನ್ನ ತಂದೆ ತಾಯಿ ಹಾಗೂ ನನ್ನ ಹೆಂಡತಿ ಸ್ಥಳಕ್ಕೆ ಓಡಿ ಬಂದರು. ಆರೋಪಿತರು ಸದ್ರಿ ಗಲಾಟೆಯ ಬಗ್ಗೆ ದೂರನ್ನು ನೀಡಿದರೆ ಕೊಲೆ ಮಾಡವುದಾಗಿ ನಮಗೆ ಧಮ್ಕಿಯನ್ನು ಹಾಕಿರುತ್ತಾರೆ. ಆನಂತರ ನಾವು 3-4 ದಿನಗಳ ಕಾಲ ದೂರನ್ನು ದಾಖಲಿಸಿರುವುದಿಲ್ಲ. ಆನಂತರ ದಿನಾಂಕಃ 23.07.2020 ರಂದು ನಾನು ಮತ್ತು ಚಾಸಾ 1 ರವರು ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇವೆ. ನಾನು ಸದ್ರಿ ಘಟನೆಯ ಬಗ್ಗೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ.

**ಪಾಟೀ ಸವಾಲುಃ ಶ್ರೀ ವಿ.ಆರ್.ಎನ್. ವಕೀಲರಿಂದಃ**

ನಮ್ಮ ಮನೆ ಖರ್ವಾ ಗ್ರಾಮದ ಸ.ನಂಃ 748 ರಲ್ಲಿ ಬರುತ್ತದೆ. ನಮ್ಮ ಮನೆಯ ಸುತ್ತಲೂ ಬೇಲಿ ಯಾ ಕಂಪೌಂಡನ್ನು ಅಳವಡಿಸಿಕೊಂಡಿರುತ್ತೇವೆ. ಸದ್ರಿ ಸ್ಥಳದಲ್ಲಿ ಸಾರ್ವಜನಿಕರು ತಿರುಗಾಡಲು ದಾರಿ ಇರುವುದಿಲ್ಲ. ಆದರೆ ನಮ್ಮ ದನಕರುಗಳು ತಿರುಗಾಡಲು ದಾರಿಯನ್ನು ಮಾಡಿರುತ್ತೇವೆ. ನಮ್ಮ ಮನೆಗೆ ಹೋಗಲು ಪ್ರತ್ಯೇಕ ದಾರಿ ಇರುತ್ತದೆ ಹಾಗೂ ನಮ್ಮ ಮನೆಯ ದನಕರುಗಳು ಹೋಗಲು ಕೊಟ್ಟಿಗೆಯ ಪಕ್ಕದಲ್ಲಿ ಮತ್ತೊಂದು ದಾರಿ ಇರುತ್ತದೆ. ಸದ್ರಿ ದನದ ಕೊಟ್ಟಿಗೆಯ ಪಕ್ಕ ಇರುವ ದಾರಿಯಲ್ಲಿ ಕೆಲವು ಸಲ ಗದ್ದೆಗೆ ಹೋಗುವಂತಹ ಜನರು ಹಾದು ಹೋಗುತ್ತಾರೆ, ನಾವು ಅದಕ್ಕೆ ಆಕ್ಷೇಪಣೆ ಮಾಡಿದ್ದು ಇರುವುದಿಲ್ಲ. ಸದ್ರಿ ಪ್ರಕರಣ ದಾಖಲಾಗುವ ಪೂರ್ವದಲ್ಲಿ ನಾವು ಸದ್ರಿ ದಾರಿಯ ಕುರಿತಾಗಿ ನ್ಯಾಯಾಲಯದ ಮುಂದೆ ಸಿವಿಲ್ ವ್ಯಾಜ್ಯವನ್ನು ಹೂಡಿದ್ದು ಇರುವುದಿಲ್ಲ. ಸದ್ರಿ ಪ್ರಕರಣ ದಾಖಲಾದ 1 ತಿಂಗಳ ಅವಧಿಯಲ್ಲಿ ನಾವು ಆ ಕೊಟ್ಟಿಗೆ ಪಕ್ಕದಲ್ಲಿರುವ ದಾರಿಯ ಕುರಿತಾಗಿ ಸಿವಿಲ್ ವ್ಯಾಜ್ಯವನ್ನು ದಾಖಲಿಸಿರುತ್ತೇವೆ.

ಈ ಪ್ರಕರಣದ ದಾಖಲಾಗುವ ಪೂರ್ವದಲ್ಲಿ ಚಾಸಾ 1 ರವರು ಇನ್ನೊಂದು ಪ್ರಕರಣವನ್ನು ಆರೋಪಿತರ ಮೇಲೆ ದಾಖಲಿಸಿದ್ದರು. ಪೋಲಿಸರು ಆರೋಪಿತರನ್ನು ಠಾಣೆಗೆ ಕರೆಸಿ ವಿಚಾರಿಸಿದ್ದಾರೆ, ಆದರೆ ಏನು ಮಾತುಕತೆ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ 1 ರವರ ಸಮಕ್ಷಮದಲ್ಲಿ ಪೋಲಿಸರು ಆರೋಪಿತರನ್ನು ವಿಚಾರಿಸಿದ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಾನು ಆ ದಿನ ಠಾಣೆಗೆ ಹೋಗಿದ್ದು ಇರುವುದಿಲ್ಲ. ಚಾಸಾ 1 ರವರನ್ನು ನಾನು ಆ ಪ್ರಕರಣದ ಕುರಿತಾಗಿ ವಿಚಾರಿಸಿದ್ದು ಇರುವುದಿಲ್ಲ.

ಪೋಲಿಸರು ಠಾಣೆಯಲ್ಲಿ ಸದ್ರಿ ದಾರಿಯು ಅನಾದಿಕಾಲದಿಂದ ತಿರುಗಾಡುವಂತಹ ದಾರಿಯಾಗಿದ್ದು ಅದಕ್ಕೆ ನೀವು ಆಕ್ಷೇಪಣೆ ಮಾಡಬೇಡಿ ಎಂದು ನನಗೆ ಹಾಗೂ ಚಾಸಾ 1 ರವರಿಗೆ ಬುದ್ಧಿವಾದ ಹೇಳಿ ಕಳುಹಿಸಿದ್ದರು ಎಂದರೆ ಸರಿಯಲ್ಲ.

ಸದ್ರಿ ಕೊಟ್ಟಿಗೆಯ ಪಕ್ಕದಲ್ಲಿರುವ ದಾರಿಯಲ್ಲಿ ನನಗೆ ಬುದ್ದಿ ಬಂದಾಗಿನಿಂದ ಸಾರ್ವಜನಿಕರು ಗದ್ದೆ ಕೆಲಸಕ್ಕೆ ಹೋಗಲು ಉಪಯೋಗಿಸುತ್ತಾ ಬಂದಿದ್ದಾರೆ, ಅದಕ್ಕೆ ನಾವು ಆಕ್ಷೇಪಣೆಯನ್ನು ಮಾಡಿದ್ದು ಇರುವುದಿಲ್ಲ. ಓಣಿ ಎಂಬ ಪದದ ಅರ್ಥ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಚಾಸಾ 4 ರವರನ್ನು ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.